ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಯವರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ – 563101.
OFFICE OF THE DEPUTY COMMISSIONER, KOLAR DISTRICT, KOLAR – 563101.
ದೂರವಾಣಿ: 08152-222001, 222002, 222098 ಫ್ಯಾಕ್ಸ್ : 08152-222133 Email: dcoffice.klr@gmail.com

ಸಂ: ಎಲ್‌ಎಕ್ಯೂ/ಸಿಆರ್-10/2016-17 ದಿನಾಂಕ: 24/04/2019.

ರವರಿಗೆ,

ಮುಖ್ಯ ಯೋಜನಾಧಿಕಾರಿಗಳು
ಯೋಜನಾ ಅನುಷ್ಠಾನ ಘಟಕ,
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ,
ಬೆಂಗಳೂರು.

ಮಾನ್ಯರೆ,

ವಿಷಯ:ಕೆಶಿಫ್-3 ಯೋಜನೆಯಲ್ಲಿ ರಸ್ತೆ ಅಗಲೀಕರಣಕ್ಕಾಗಿ ಅಗತ್ಯವಾದ ಅರಣ್ಯ ಭೂಮಿಗೆ ಪರ್ಯಾಯವಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕಾದ ಅರಣ್ಯೇತರ ಭೂಮಿಯನ್ನು ಬಿಡುಗಡೆ ಮಾಡುವ ವಿಚಾರ.

ಉಲ್ಲೇಖ:1.ಮುಖ್ಯಯೋಜನಾಧಿಕಾರಿಗಳು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ದಿ ಯೋಜನೆ, ಕೆಶಿಫ್-3, ಬೆಂಗಳೂರು ರವರ ಪತ್ರ ಸಂ:ಪಿಐಯು:ಕೆಶಿಫ್-3:ಬೆಂಗಳೂರು: ಫಾರೆಸ್ಟ್: ಎಡಿಬಿ:ಸಿಆರ್:06/2015-16 ದಿನಾಂಕ:09/03/2017.
2.ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ ಪತ್ರ ಸಂ:ಎಲ್‌ಎಕ್ಯೂ:ಸಿಆರ್:38/2016-17 ದಿನಾಂಕ:18/12/2017.
3.ಈ ಕಛೇರಿಯಿಂದ ಸರ್ಕಾರಕ್ಕೆ ಬರೆದ ಪತ್ರ ಸಂ:ಎಲ್‌ಎಕ್ಯೂ:ಸಿಆರ್:10/2016-17 ದಿನಾಂಕ:05/01/2018.
4.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರ ಪತ್ರ ಸಂ:ಆರ್‌ಡಿ:28:ಎಲ್‌ಜಿಕೆ:2018 ದಿನಾಂಕ:28/11/2018.
5.ಈ ಕಛೇರಿ ಅಧಿಸೂಚನೆ ಸಂ:ಎಲ್‌ಎಕ್ಯೂ:ಸಿಆರ್:10/2016-17 ದಿನಾಂಕ: 11/12/2018.
6.ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕ:24/01/2019 ಭಾಗ-3 ಪುಟ 110-111.

********

ವಿಷಯಕ್ಕೆ ಸಂಬಂಧಿಸಿದಂತೆ, ಕೆಶಿಫ್-3 ಯೋಜನೆಯಲ್ಲಿ ಚಿಂತಾಮಣಿ ತಾಲ್ಲೂಕು ಗಡಿಯಿಂದ ರಾಜ್ಯದ ಗಡಿ ಮದನಪಲ್ಲಿ ರಸ್ತೆವರೆಗೆ ರಾಜ್ಯ ಹೆದ್ದಾರಿ ಎಸ್.ಹೆಚ್-82 ರಸ್ತೆ ಅಗಲೀಕರಣ ಪ್ರಕ್ರಿಯೆಯಲ್ಲಿ ಭೂ ಸ್ವಾಧೀನವಾಗುವ ರಾಜ್ಯ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಟ್ಟ ಅರಣ್ಯ ಪ್ರದೇಶ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿದ್ದು, ಶ್ರೀನಿವಾಸಪುರ ತಾಲ್ಲೂಕಿನ ಗ್ರಾಮಗಳಾದ (1).ರಾಯಲ್ಪಾಡು ಸ.ನಂ.268 ರಲ್ಲಿ ವಿಸ್ತೀರ್ಣ 2.5224 ಹೆ, (2).ಗುಂಟಪಲ್ಲಿ ಗ್ರಾಮದ ಸ.ನಂ.16 ರಲ್ಲಿ 0.3525 ಹೆ, ಸ.ನಂ.17 ರಲ್ಲಿ 0.6454 ಹೆ, ಮತ್ತು ಸ.ನಂ.18 ರಲ್ಲಿ 1.3465 ಹೆ, ಈ ಗ್ರಾಮದ ಒಟ್ಟು 7.7328 ಹೆ (3), ಮಂಡ್ಯಾಲ ಸ.ನಂ.145 ರಲ್ಲಿ 1.5195 ಹೆ, (4).ತೂಪಲ್ಲಿ ಸ.ನಂ.98 ರಲ್ಲಿ 1.1388 ಹೆ, (5).ಸುಣ್ಣಕಲ್ಲು ಸ.ನಂ.68 ರಲ್ಲಿ 1.4528 ಹೆ. (6) ಯಂಡಗುಟ್ಟಪಲ್ಲಿ ಸ.ನಂ.55 ರಲ್ಲಿ 0.7550 ಹೆ, ಒಟ್ಟು ವಿಸ್ತೀರ್ಣ 16.5458 ಹೆಕ್ಟೇರ್ ರಾಜ್ಯ ಅರಣ್ಯ ವ್ಯಾಪ್ತಿಯ 16.54 ಹೆಕ್ಟೇರ್ ಜಮೀನು ರಸ್ತೆ ಅಗಲೀಕರಣಕ್ಕೆ ಜೆ.ಎಂ.ಸಿ ತನಿಖೆಯಲ್ಲಿ ಭೂ ಸ್ವಾಧೀನವಾಗುತ್ತಿದ್ದು, ಇದಕ್ಕೆ ಪರ್ಯಾಯವಾಗಿ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಅಂತರಗಂಗೆ ಪ್ರದೇಶದ ಬೆಟ್ಟದ ಹೊಸಹಳ್ಳಿ ಗ್ರಾಮದ ಸ.ನಂ.9 ರಲ್ಲಿ ಇರುವ ಸರ್ಕಾರಿ ಖರಾಬು ಗುಡ್ಡ ಪ್ರದೇಶದಲ್ಲಿ 42-00 ಎಕರೆ ಜಮೀನು ಅರಣ್ಯೇತರ ಜಮೀನಾಗಿದ್ದು, ಈ ಜಮೀನನ್ನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ವರ್ಗಾಯಿಸಲು ಪ್ರಸ್ತಾವನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗಿತ್ತು. ಸರ್ಕಾರವು ಉಲ್ಲೇಖ (4) ರಂತೆ ಪ್ರಸ್ತಾಪಿತ ಬೆಟ್ಟದ ಹೊಸಹಳ್ಳಿ ಸ.ನಂ.9 ರಲ್ಲಿ ಗುರ್ತಿಸಿರುವ ಸರ್ಕಾರಿ ಜಮೀನಿನ ಪೈಕಿ 42-00 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 68(1) ಮತ್ತು 68(5) ರನ್ವಯ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಕ್ರಮವಹಿಸುವ ಷರತ್ತುಗೊಳಪಟ್ಟು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲು ಪೂರ್ವಾನುಮತಿಯನ್ನು ನೀಡಿರುತ್ತದೆ.

... 2

132



ಅದರಂತೆ ಪ್ರಸ್ತಾಪಿತ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಬೆಟ್ಟದ ಹೊಸಹಳ್ಳಿ ಗ್ರಾಮದ ಸ.ನಂ.9 ರಲ್ಲಿ ಗುರ್ತಿಸಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ 42-00 ಎಕರೆ ಸರ್ಕಾರಿ ಖರಾಬು ಗುಡ್ಡ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1) ರಡಿಯಲ್ಲಿ ಅಧಿಸೂಚನೆಯನ್ನು ಉಲ್ಲೇಖ (5) ರಂತೆ ಹೊರಡಿಸಲಾಗಿದ್ದು, ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಉಲ್ಲೇಖ (6) ರಂತೆ ಪ್ರಕಟವಾಗಿರುತ್ತದೆ. ಈಗ ಪ್ರಕರಣದಲ್ಲಿ ಉಲ್ಲೇಖ (4) ಸರ್ಕಾರದ ಪತ್ರದಂತೆ ಕಲಂ 68(1) ಮತ್ತು 68(5) ರ ರೀತ್ಯಾ ಕ್ರಮ ವಹಿಸಿರುವುದರಿಂದ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಬೆಟ್ಟದ ಹೊಸಹಳ್ಳಿ ಗ್ರಾಮದ ಸ.ನಂ.9 ರಲ್ಲಿ ಗುರ್ತಿಸಿರುವ ಸರ್ಕಾರಿ ಖರಾಬು ಗುಡ್ಡ ಜಮೀನಿನ ಪೈಕಿ ವಿಸ್ತೀರ್ಣ 42-00 ಎಕರೆ ಜಮೀನಿಗೆ ಚೆಕ್ಕುಬಂದಿ ಪೂರ್ವಕ್ಕೆ-ಇದೇ ಗ್ರಾಮದ ಸ.ನಂ.9 ರಲ್ಲಿ ಸರ್ಕಾರಿ ಉಳಿಕೆ ಜಮೀನು, ಪಶ್ಚಿಮಕ್ಕೆ-ನಾಗಲಾಪುರ ಗ್ರಾಮದ ಗಡಿ ಜಮೀನು, ಉತ್ತರಕ್ಕೆ-ಚಲ್ಲಹಳ್ಳಿ ಗಡಿ, ದಕ್ಷಣಕ್ಕೆ-ಇದೇ ಸ.ನಂ.9 ರಲ್ಲಿರುವ ಸರ್ಕಾರಿ ಖರಾಬು ಗುಡ್ಡ ಜಮೀನು, ಈ ಚೆಕ್ಕುಬಂದಿಗೊಳಪಟ್ಟ ಜಮೀನನ್ನು ಗುರ್ತಿಸಿ, ಭೌತಿಕವಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಹಾಗೂ ಕಂದಾಯ ದಾಖಲೆಗಳಲ್ಲಿ ಈ ಜಮೀನನ್ನು ಅರಣ್ಯ ಇಲಾಖೆಯ ಹೆಸರಿಗೆ ನಮೂದಿಸಲಾಗಿದೆ. ನಮೂದಿಸಿದ ಬಗ್ಗೆ ಪಹಣಿ, ಮುಟೇಷನ್ ಮತ್ತು ಸರ್ವೆನಕ್ಷೆ ದಾಖಲೆಗಳ ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ.